ನಾನು ಬೆಂಗಳೂರಿಂದ, ಪ್ರೀತಂ ಕಾರವಾರದಿಂದ ಬಂದಿದ್ವಿ. ಅಕಸ್ಮಾತಾಗಿ ಇಬ್ಬರೂ ಕಲಬುರ್ಗಿಯಲ್ಲಿ ಮೀಟ್ ಆದ್ವಿ. ನಿನ್ನೆ ರಾತ್ರಿ ಆಡಿಶನ್ ಆಯ್ತು. ನಮ್ಮ ಕತೆಗೆ ಹೇಳಿ ಮಾಡಿಸಿದ ಹುಡುಗ ಈತ' ಎಂದರು.

ಪತ್ರಕರ್ತರು ಪ್ರೀತಂನತ್ತ ತಿರುಗಿ, 'ನಿಮಗೆ ಅಭಿನಯದಲ್ಲಿ ಏನಾದರೂ ಅನುಭವ ಇದೆಯಾ?' ಎಂದು ಪ್ರಶ್ನಿಸಿದರು. 'ಅನುಭವ ಎಂತದೂ ಇಲ್ಲ. ಇದೆಲ್ಲ ಹೊಸತು ನಂಗೆ. ಆದರೆ ಇತ್ತೀಚೆಗೆ ಒಂದ ನಮೂನಿ ಅನುಭವ ಆಗ್ತಿತ್ತು. ಈಗ ಸಂಭವಿಸುತ್ತಿರುವುದೆಲ್ಲ ನಾಟಕೀಯ, ಈ ಕ್ಷಣ ನಡೀತಿರುವುದೆಲ್ಲ ಸಿನಿಮೀಯ ಅನಿಸುತ್ತಿತ್ತು. ನಾನು ಆ ದೃಶ್ಯಗಳಲ್ಲಿ ಒಬ್ಬ ಪಾತ್ರಧಾರಿ ಅನಿಸುತ್ತಿತ್ತು. ಇದು ಎಷ್ಟರಮಟ್ಟಿಗೆ ನಟನಾಗಲಿಕ್ಕೆ ಹೆಲ್ಪಾಗುವುದೋ ಗೊತ್ತಿಲ್ಲ. ಸಿನಿಮಾಕ್ಕೆ ಬರೂದಂತೂ ಕನಸಲ್ಲೂ ಇರಲಿಲ್ಲ. ಇಲ್ಲಿವರೆಗೂ ನನ್ನನ್ನು ಬರುವಂತೆ ಮಾಡಿದ ಕನಸೇ ಬೇರೆ. ಈ ಬಿಸಿಲನಾಡು ಹೊಸದೇ ಆದ ಕನಸನ್ನು ಚಿಗುರಿಸಿದೆ. ನಾಗತಿಹಳ್ಳಿ ಸರ್ ಅವರಂಥ ಪ್ರಖ್ಯಾತ ನಿರ್ದೇಶಕರೊಂದಿಗೆ ಕೆಲಸ ಮಾಡುವ ಚಾನ್ಸ್ ಸಿಕ್ಕಿದ್ದು ಒಂದು ಆಕಸ್ಮಿಕ' ಎಂದ.

'ಇಲ್ಲಿವರೆಗೂ ಬರುವಂತೆ ಮಾಡಿದ ಕನಸೇ ಬೇರೆ ಅಂದ್ರಿ... ಆ ಕನಸಿನ ಬಗ್ಗೆ ಸ್ವಲ್ಪ ಹೇಳ್ತೀರಾ?' ಎಂದು ಪತ್ರಕರ್ತರೊಬ್ಬರು ಪ್ರಶ್ನೆ ಕೇಳಿದಾಗ ಏನೋ ಹೇಳಬೇಕೆಂದಿದ್ದ ಪ್ರೀತಂನನ್ನು ತಡೆದು ನಾಗತಿಹಳ್ಳಿ ಸರ್ 'ಅದನ್ನು ಸಿನಿಮಾದಲ್ಲೆ ತೋರಿಸುತ್ತೀವಿ, ಕಣ್ರೀ' ಎಂದು ಪ್ರೀತಂನತ್ತ ನೋಡಿ ನಕ್ಕರು. ಪ್ರೀತಂ ಸುಮ್ಮನಾದ. ನಾಗತಿಹಳ್ಳಿಯವರ ಮುಗುಳುನಗುವಿಗೆ ಅದೆಷ್ಟು ಅರ್ಥಗಳಿವೆ ಅನಿಸಿತು ಅವನಿಗೆ!

ಪ್ರೆಸ್ ಮೀಟ್ ನಂತರ ಪ್ರೀತಂ ಎದ್ದು ನಮಸ್ಕರಿಸಿ, 'ಸರ್, ಫಿಲ್ಮ್ ಲೈನಿಗೆ ಬರುದು ರಾಶಿ ಖುಶಿಯಾಗಿದೆ. ನಿಮಗೆ ಥ್ಯಾಂಕ್ಸ್ ಹೇಗೆ ಹೇಳೂದು ಸರ್?' ಅಂದ. ನಾಗತಿಹಳ್ಳಿಯವರು ಅವನ ಮಾತು ಕೇಳದವರಂತೆ 'ಮುಂದಿನ ವಾರ ನೀನು ಬೆಂಗಳೂರಲ್ಲಿರಬೇಕು ಕಣಯ್ಯಾ. ನಿನ್ನ ಟಿಕೆಟ್, ಅಲ್ಲಿ ಉಳಕೊಳ್ಳೋಕೆ ಎಲ್ಲಾ ವ್ಯವಸ್ಥೆ ಮಾಡ್ತಾರೆ. ನಿನಗೆ ಸಿನಿಮಾ ಸ್ಕ್ರಿಪ್ಟು, ಆಕ್ಟಿಂಗು ಇತ್ಯಾದಿ ಬೇಸಿಕ್ ವಿಷಯಗಳ ಬಗ್ಗೆ ಚೂರು ಟ್ರೇನಿಂಗ್ ಬೇಕಾಗುತ್ತೆ. ಕಾರವಾರದಲ್ಲಿ ನಿನ್ನ ತಾಯಿ ಒಬ್ಬರೇ ಇರ್ತಾರೆ ಗೊತ್ತು. ಬೇಕಾದ್ರೆ ಅವರನ್ನ ಬೆಂಗಳೂರಿಗೇ ಕರೆಸೋಣ' ಅಂದರು.

ಬೆಂಗಳೂರು! ತನ್ನ ಲೈಫ್ ಅದೆಷ್ಟು ಫಾಸ್ಟ್ ಮೋಡ್‌ನಲ್ಲಿ ಬದಲಾಗ್ತಿದೆ, ಎಂದು ಯೋಚಿಸುತ್ತಾ ನಿಂತ. ನಾಗತಿಹಳ್ಳಿ ಸರ್ ಅವನ ಹೆಗಲ ಮೇಲೆ ಕೈ ಹಾಕಿ 'ಡೋಂಟ್ ವರೀ ಯಂಗ್ ಮ್ಯಾನ್, ಸುಮಿ ವಿಲ್ ಬಿ ಯುವರ್ಸ್, ಐ ಆಮ್ ಶ್ಯೂರ್' ಅಂದರು.

## 6

**ಕಾರವಾರದ ಕಿಂಗ್‌ಫಿಶರ್ ಕಲಬುರಗಿಯ ಗುಲ್‌ಮೊಹರ್**

ನಾಗತಿಹಳ್ಳಿ ಸರ್ ತಮ್ಮ ಎಂದಿನ ನಗುವಿನೊಂದಿಗೆ 'ಡೋಂಟ್ ವರಿ' ಎಂದೇನೋ ಹೇಳಿದ್ದರು. ಆದರೆ ಪ್ರೀತಂನಿಗೆ ವರಿ ಆಗದಿರಲು ಸಾಧ್ಯವಿರಲಿಲ್ಲ. ಸುಮಿಯ ಪ್ರೇಮವು ಜಗತ್ತನ್ನು ಹೊಸತೇ ಆದ ರೀತಿಯಲ್ಲಿ ಅನಾವರಣಗೊಳಿಸಿದ್ದು ಒಂದೆಡೆಯಾದರೆ, ಅದೇ ಪ್ರೇಮವು ತನ್ನನ್ನೇ ತಾನು ಅರಿಯುವುದಕ್ಕೂ ಕಾರಣವಾದದ್ದು ನಿಜ. ಗುಲ್ಬರ್ಗಾ ಬಸ್ಸು ಹತ್ತುವಾಗ ತಾನು ಹುಡುಕಹೊರಟಿದ್ದು ಸುಮಿಯನ್ನು ಮಾತ್ರವಲ್ಲ, ತನ್ನ ನೈಜ ಅಸ್ಮಿತೆಯನ್ನೂ (ಸುಮಿಯೇ ಹೇಳಿಕೊಟ್ಟ ಪದ) ಅಂದುಕೊಂಡಿದ್ದ. ಆದರೆ ಆ ಪ್ರಯಾಣ ಇಲ್ಲಿ ಬೇರೆಯದೇ ಆದ ತಿರುವಿಗೆ ತನ್ನನ್ನು ತಂದು ನಿಲ್ಲಿಸಿದೆ. ಆಯ್ಕೆಯ, ನಿರಾಕರಣೆಯ ಅವಕಾಶವನ್ನೂ ತೆಳುಗೊಳಿಸುವಂಥ ತಿರುವು ಇದು. ಶೈಲತ್ತೆಗೆ 'ಸುಮಿಯೊಂದಿಗೆ ಫೋನಿನಲ್ಲಾದರೂ ಮಾತಾಡುವ ಹಾಗೆ ಮಾಡಿ' ಎಂದು ಅಂಗಲಾಚಿದ್ದ. ಆ ಭವ್ಯ ಮನೆಯ ನೂರಾರು ಬಾಗಿಲುಗಳಲ್ಲಿ ಯಾವುದಾದರೂ ಒಂದು ಬಾಗಿಲಿನಿಂದ ಸುಮಿ ಪ್ರಕಟವಾಗುವಳು ಎಂಬ ನಿರೀಕ್ಷೆ ಹುಸಿಯಾಗಿತ್ತು. ನಾಗತಿಹಳ್ಳಿ ಸರ್ ಅವರು ಲಿಂಗನಗೌಡ ಪಾಟೀಲ ಕುಟುಂಬದ ಎದುರೇ ತಮ್ಮ ಪ್ರೀತಿಯನ್ನು ಒಪ್ಪಿಕೊಳ್ಳುವಂತೆ ಬಹಿರಂಗವಾಗಿ ಯಾಚಿಸಿದ್ದು, ಸಿನಿಮಾದಲ್ಲಿ ತನ್ನ ಆಯ್ಕೆ ಘೋಷಿಸಿದ್ದು ಅಚ್ಚರಿಯನ್ನೂ ಖುಷಿಯನ್ನೂ ಉಂಟುಮಾಡಿದ್ದು ಸುಳ್ಳಲ್ಲ. ಆದರೆ ಸುಮಿಯನ್ನು ಕಾಣದೇ ಅವೆಲ್ಲ ನಿಜಕ್ಕೂ ಸಂಭ್ರಮ ಆಗಲಿಲ್ಲ. ಆಯಿ ಜೊತೆ ಮಾತಾಡಿ ಸಿನಿಮಾ ಸಿಹಿ ಸುದ್ದಿನಾದ್ರೂ ಹೇಳೋಣ, ಈ ಟೆನ್ಶನ್ ಟೈಮಲ್ಲಿ ಸ್ವಲ್ಪ ಸಮಾಧಾನ ಆಗಲಿ ಎಂದು ಫೋನ್ ಮಾಡಿದರೆ, ರಿಸೀವ್ ಮಾಡುವಾಗಲೇ 'ಹುಡುಗಿ ಸಿಕ್ಕಿದ್ಳಾ ಮಗ? ಆರಾಮ ಇದ್ಯಾ?' ಎಂದಳು. ಅವಳಿಗೆ ಏನೋ ಸಮಾಧಾನದ ಮಾತು ಹೇಳಿ ಫೋನು ಕಟ್ ಮಾಡಿದ.

ಸಿನಿಮಾ ಸುದ್ದಿ ಗಂಟಲಲ್ಲೇ ಉಳಿಯಿತು. ಇರಲಿ ನಾಳೆ ಬೆಳಿಗ್ಗೆ ಹೇಳಿದರಾಯ್ತು, ಈಗ ಸ್ವಲ್ಪ ರೆಸ್ಟ್ ಬೇಕು ಎಂದು ಹಾಗೇ ಅಡ್ಡಾದ. ನಾಗತಿಹಳ್ಳಿ ಸರ್ ಅವರೇ ಇವನನ್ನು ಈ ಹೋಟೆಲ್ಲಿನಲ್ಲಿ ಉಳಿಯುವ ವ್ಯವಸ್ಥೆ ಮಾಡಿದ್ದರು. ಬಸ್ ಸ್ಟ್ಯಾಂಡಿನಲ್ಲಿ ಮಲಗುವ ಯೋಚನೆ ಮಾಡಿದವನಿಗೆ, ಈಗ ಅದ್ದೂರಿ ಹೋಟೆಲಿನಲ್ಲಿ ಉಳಿಯುವ ಭಾಗ್ಯ ಬಂದ ಬಗ್ಗೆ ಅವನಿಗೇ ನಗು ಬಂತು. ಆಗಲೇ ಡೋರ್ ಬೆಲ್ ಸದ್ದಾದದ್ದು. ಹೌದೋ ಅಲ್ಲವೋ ಎನ್ನುವ ಅನುಮಾನದಲ್ಲೆ ಬಾಗಿಲು ಸರಿಸಿದ. ಬಾಗಿಲೆದುರು ನಿಂತವನು 'ನಾಗತಿಹಳ್ಳಿ ಸರ್ ಅವ್ರು ಕೆಳಗೆ ರಿಸೆಪ್ಶನ್ನಿಗೆ ಕರೀತಿದ್ದಾರೆ' ಎಂದು ಹೇಳಿ ಅಲ್ಲಿಂದ ಹೋಗೇಬಿಟ್ಟ. ಪ್ರೀತಂನಿಗೆ ಸ್ವಲ್ಪ ಆತಂಕ ಉಂಟಾಯಿತು. ಸುಮಿಯ ಕಡೆಯವರು ಮತ್ತೆ ಏನಾದರೂ ಖತರ್ನಾಕ್ ಕಾರ್ಯಕ್ಕೆ ಇಳಿದಿರುವರೋ ಹೇಗೆ ಎಂಬ ಅನುಮಾನ ಬಂದು ನಿಧಾನಿಸಿದ. ಅಷ್ಟರಲ್ಲಿ ಫೋನ್ ರಿಂಗಾಯ್ತು. ನಾಗತಿಹಳ್ಳಿ ಸರ್ 'ಹುಡುಗಾ ಕೆಳಗೆ ಬಾ, ನಿನಗೊಂದು ಸರಪ್ರೈಸ್ ಇದೆ' ಎಂದು ಫೋನ್ ಇಟ್ಟರು. ಪ್ರೀತಂ ಶರ್ಟ್ ಹಾಕಿ ಕೆಳಗೆ ಬಂದಾಗ ಅವನ ಕಣ್ಣುಗಳನ್ನು ನಂಬಲಿಕ್ಕಾಗಲಿಲ್ಲ. ಸುಮಿ!

'ಹೈ ಪ್ರೀತ್' ಅಂದಳು. 'ಹೈ ಸು' ಎಂದ. 'ನಮ್ಮೂರಲ್ಲಿ ಏನ್ ಮಾಡಾಕ್ ಹತ್ಯೋ?' ಅಂದಳು. 'ನೀನಿಲ್ಲದೇ ಕಾರವಾರದ ಕಡಲಿನ ಭರತ ಇಳಿತ ನಿಂತೋಗಿದೆ' ಅಂದ. ನಾಗತಿಹಳ್ಳಿಯವರು 'ಲೋ ಮಕ್ಕಳ್ರಾ, ನಮ್ಮೆದುರು ನಾಟಕಾ ಸಾಕು, ಓಗಿ ಗಾರ್ಡನ್ನಿನಲ್ಲಿ ವಸಿ ಅಡ್ಡಾಡಿ ಬನ್ನಿ. ನಾವ್ ದೊಡ್ಡೋರು ಇಂಪಾರ್ಟೆಂಟ್ ಏನೋ ವಿಸ್ಯ ಮಾತಾಡ್ತೀವಿ' ಅಂದರು. ಸುಮಿ ಮತ್ತು ಪ್ರೀತಂ ಹೋಟೆಲ್ ಎದುರಿನ ಗಾರ್ಡನ್ ಕಡೆ ಹೊರಟರು. ಹೋಟೆಲ್ಲಿನ ರಿಸೆಪ್ಷನ್ನಿನಲ್ಲಿ ನಾಗತಿಹಳ್ಳಿ ಸರ್, ಲಿಂಗಣ್ಣ ಮತ್ತು ಶೈಲತ್ತೆ ಮಾತ್ರ ಉಳಿದರು. ತಮಾಷೆಯಲ್ಲೇ ಹುಡುಗ ಹುಡುಗಿಯರಿಗೆ ಏಕಾಂತ ಕ್ಷಣಗಳನ್ನು ಒದಗಿಸಿಕೊಟ್ಟ ನಾಗತಿಹಳ್ಳಿಯವರನ್ನು ಕೃತಜ್ಞತಾಪೂರ್ವಕವಾಗಿ ನೋಡಿದಳು ಶೈಲತ್ತೆ. ಸುಮಿ ಮತ್ತು ಪ್ರೀತಂ ಗೇಟ್ ದಾಟುವಾಗ 'ಗಾರ್ಡನ್ನಿನಿಂದಲೇ ಇಬ್ಬರೂ ಓಡಿಹೋಗುವ ಪ್ರಯತ್ನ ಮಾಡಬೇಡಿ, ನಿಮ್ಮ ಪ್ರೇಮಕತೆಯ ಸ್ಕ್ರಿಪ್ಟ್ ಹಾಗೆ ಇಲ್ಲ. ಪ್ರೇಮಿಗಳನ್ನು ಇನ್ನೂ ಗೋಳು ಹೊಯ್ದುಕೊಳ್ಳೋದು ಬಾಕಿಯಿದೆ. ಅಂಥ ಪ್ರೇಮಕಥೇನೆ ಜನ ಇಷ್ಟಪಡೋದು ಮಕ್ಕಳಾ' ಎಂದು ನಕ್ಕರು. ಅವರ ಮಾತಿಗೆ ಶೈಲತ್ತೆ ನಕ್ಕರೂ ಹೇಗೆ ಪ್ರತಿಕ್ರಿಯಿಸುವುದು ಎಂದು ತಿಳಿಯದೇ ಲಿಂಗಣ್ಣನವರು ಪೆದ್ದನಂತಾಗಿದ್ದರು.

ಲಿಂಗಣ್ಣನವರು ಮಂಕಾಗಿದ್ದರು. ನಾಗತಿಹಳ್ಳಿಯವರಿಗೆ ಅವರ ಮನಸ್ಸಿನ ತುಮುಲಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಿರಲಿಲ್ಲ. ಲಿಂಗಣ್ಣನವರ ಪಾಳೆಗಾರಿಕೆಯ ಗತ್ತು ಮತ್ತು ಅಹಂಕಾರವು ಮಗಳ ಪ್ರೇಮದೆದುರು ಮಂಡಿಯೂರುತ್ತಿರುವುದು ವೇದ್ಯವಾಗುತ್ತಿತ್ತು. ಸ್ವತಃ ಶೈಲತ್ತೆಯೇ ಅಣ್ಣನನ್ನು ಇಷ್ಟು ಬಲಹೀನ ಸ್ಥಿತಿಯಲ್ಲಿ ಕಂಡಿರಲಿಲ್ಲ. ಲಿಂಗಣ್ಣನವರ ಮನಸ್ಸು ಇನ್ನಷ್ಟು ಹೊತ್ತು ಪಶ್ಚಾತ್ತಾಪದಲ್ಲಿ, ವೇದನೆಯಲ್ಲಿ ಹಾಯಲಿ ಎಂಬಂತೆ ನಾಗತಿಹಳ್ಳಿಯವರು ಬೇರೆಬೇರೆ ಮಾತು ತೆಗೆದು ಕೂತರು. ತುಂಬಾ ದಿನಗಳ ನಂತರ ಜೊತೆಯಾಗಿರುವ ಹುಡುಗ ಹುಡುಗಿ ಅವಸರವಿಲ್ಲದೇ ಪ್ರೀತಿ ಮಾತುಗಳನ್ನಾಡಿಕೊಳ್ಳಲಿ ಎಂಬ ಇರಾದೆಯೂ ಇದ್ದೀತು. ತಮ್ಮ ಈಶಾನ್ಯ ರಾಜ್ಯಗಳು ಮತ್ತು ಅಮೆರಿಕ ಪ್ರವಾಸಗಳನ್ನು ಕುರಿತು ಕತೆ ಕತೆಯಾಗಿ ಹೇಳಿದರು. ಅಲ್ಲಿಯ ನಿಸರ್ಗ ಸೌಂದರ್ಯದ ವರ್ಣನೆಯ ನಡುವೆ, ಪ್ರೇಮ ಕತೆಗಳನ್ನೂ ಹೆಣೆದರು. ಯಾವುದೋ ಗಳಿಗೆಯಲ್ಲಿ ಲಿಂಗಣ್ಣ ನಾಗತಿಹಳ್ಳಿಯವರ ಕೈ ಹಿಡಿದು 'ನಾ ತಂಗಿ ಶೈಲುಳ ಬಾಳನ್ನು ಹಾಳು ಮಾಡಿದ್ದು ಖರೇರಿ. ಆ ನೋವು ಶೂಲದಂತೆ ಚುಚ್ಚುತಿರತೈತಿ. ಅದನ್ನು ಒಳಗಿಂದೊಳಗ ಇಟಗೊಂಡು ಮನಸು ನವಿತಿರತೈತಿ, ಸಾಯಬ್ರ. ಮಗಳದೂ ಅದೇ ಕತಿಯಾದ್ರ ಸಹಿಸಿಕೊಳ್ಳಾಕ ಸಾಧ್ಯ ಇಲ್ರೀ' ಅಂದು ಕಣ್ಣಲ್ಲಿ ನೀರು ತಂದುಕೊಂಡರು.

'ಸಾಯಬ್ರ ಖರೇ ಅಂತೀನಿ. ನಮ್ಮ ಮಗಳಿಗೆ ಕೂಡ ಹಾಕಿದ್ದವ ಅಲ್ರೀ ನಾ ಅಲ್ರೀ... ನನ್ನ ಮಗ ವಿರುಪಾಕ್ಷಿದ ಕೆಲಸಾರಿ ಇದು. ಇಂವ ಮತ್ತ ಇಂವ್ನ ಮಾವಾ, ಅಂದ್ರ ನನ್ನ ಹೆಂಡ್ತಿ ತಮ್ಮ, ಚೆನ್ನೇಶ ಕೂಡಿ ಹೆಂಗಾರ ಮಾಡಿ ಈ ಕಾರವಾರದ ಹುಡುಗನ್ನ ಪ್ರೀತಿ ತಪ್ಪಿಸಬೇಕು ಅಂತ ಜಿದ್ದಿಗ ಬಿದ್ದಾರ ರೀ. ನನ್ನ ಮಾತ ಸೈತ ಕೇಳಾಂಗಿಲ್ರೀ' ಅಂದರು.

(ಸಶೇಷ)